# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಇಂಡಿ.

**OS No**.61/2019

**DW**:1

**ದಿನಾಂಕ 24.11.2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ.ಐ.ಎಸ್.ಎಮ್. ವಕೀಲರಿಂದ:**

ನಾವು 4 ಜನ ಅಣ್ಣ ತಮ್ಮಂದಿರು. 1 ನೇ ವಾದಿ ನನ್ನ ಸ್ವಂತ ಅಣ್ಣ ಎಂದರೆ ಸರಿ. 2 ನೇ ಪ್ರತಿವಾದಿ ನನ್ನ ಸ್ವಂತ ತಮ್ಮ ಎಂದರೆ ಸರಿ. ನನ್ನ ತಂದೆಯ ಹೆಸರು ರೇವಪ್ಪ ಗಿಣ್ಣಿ ಎಂದರೆ ಸರಿ. ನಮ್ಮ ಮನೆತನಕ್ಕೆ 3 ಆಸ್ತಿಗಳು ಅವುಗಳೆಂದರೆ 394, 392 ಮತ್ತು 432 ಎಂದರೆ ಸರಿ. ಸರ್ವೆ ನಂ. 394 ರ ಉತ್ತರಕ್ಕೆ ಪಶ್ಚಿಮ ಪೂರ್ವ ಒಂದು ಹಳ್ಳ ಬರುತ್ತದೆ ಎಂದರೆ ಸರಿ. ಸರ್ವೆ ನಂ. 394 ರ ದಕ್ಷಿಣಕ್ಕೆ ಗಡ್ಡೆಪ್ಪ ಗಿಣ್ಣಿಯವರ ಜಮೀನು ಬರುತ್ತದೆ ಎಂದರೆ ಸರಿ. ಸದರಿ ಗಡ್ಡೆಪ್ಪ ಗಿಣ್ಣಿಯವರ ಜಮೀನಿನ ಸರ್ವೆ ನಂ.390 ಎಂದರೆ ಸರಿ. ಸದರಿ ಗಡ್ಡೆಪ್ಪ ಗಿಣ್ಣಿ ಇವರ ಜಮೀನಿಗೆ ಹೊಂದಿಕೊಂಡಂತೆ ಬಸಲಿಂಗಪ್ಪ ಇವರ ಜಮೀನು ಸರ್ವೆ ನಂ.387 ಬರುತ್ತದೆ ಎಂದರೆ ಸರಿ. ಸರ್ವೆ ನಂ.387 ರ ಪಶ್ಚಿಮಕ್ಕೆ ಸರ್ವೆ ನಂ.388 ಮತ್ತು 389 ಬರುತ್ತದೆ ಎಂದರೆ ಸರಿ. ಸರ್ವೆ ನಂ.394 ರ ಉತ್ತರಕ್ಕೆ ವಿರೋಬಾ ಇವರ ಸರ್ವೆ ನಂ.393 ಬರುತ್ತದೆ ಎಂದರೆ ಸರಿ. ಸರ್ವೆ ನಂ.394, 390, 387, 387/1 ಇದಕ್ಕೆ ಸರ್ವೆ ನಂ.394 ರಲ್ಲಿ ಪಶ್ಚಿಮಕ್ಕೆ ಒಂದು ಹಾದಿ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಹಾದಿಯು ನೂರಾರು ವರ್ಷಗಳ ಹಿಂದಿನ ದಾರಿ ಇದ್ದು ಅದು ಹಳ್ಳದತನಕ ಹೋಗುತ್ತದೆ ಎಂದರೆ ಸರಿಯಲ್ಲ. ನಮ್ಮ ಜಮೀನಿನ ಪಶ್ಚಿಮಕ್ಕೆ UKP ಕೆನಾಲ್ ಇದೆ ಎಂದರೆ ಸಾಕ್ಷಿಯು ಮಾಲಗಾರ ರವರ ಜಮೀನಿನ ಪಕ್ಕದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ದಾರಿಯನ್ನು UKP ಯವರು ದುರಸ್ಥಿ ಮಾಡಿ ಒಳ್ಳೆಯ ಹಾದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಹಾದಿಯನ್ನು ಮಣ್ಣು, ಕಲ್ಲು ಎಲ್ಲವನ್ನು ಮಾಡಿ ಚೆನ್ನಾಗಿ ಹಾದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಬಂದು ನೋಡಿರಿ ಎಂದು ನುಡಿಯುತ್ತಾರೆ. ನಾನು, 1 ನೇ ವಾದಿ ಮತ್ತು 2 ನೇ ಪ್ರತಿವಾದಿ ನಮ್ಮ ಮನೆತನದಲ್ಲಿ ಇದ್ದ ಆಸ್ತಿ ನಂ.394 ಮತ್ತು ಇನ್ನಿತರ ಆಸ್ತಿಗಳಲ್ಲಿ ವಾಟ್ನಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ.

-2-

ಸರ್ವೆ ನಂ.394 ರಲ್ಲಿ 3 ಪಟ್ಟಿಗಳನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಸದರಿ 394/1 ಇದು ನನಗೆ ಬಂದಿರುತ್ತದೆ ಎಂದರೆ ಸರಿ. ನನ್ನ ಜಮೀನಿನ ದಕ್ಷೀಣ ದಿಕ್ಕಿಗೆ ಸರ್ವೆ ನಂ.394/2 ಇದು 2 ನೇ ಪ್ರತಿವಾದಿಗೆ ಸೇರಿದ ಆಸ್ತಿ ಬರುತ್ತದೆ ಎಂದರೆ ಸರಿ. ಸದರಿ 394/2 ಇದು 2 ನೇ ಪ್ರತಿವಾದಿಯ

2 ನೇ ಹಿಸ್ಸಾ ಎಂದರೆ ಸರಿ. ನನ್ನ ಹಾಗೂ 2 ನೇ ಪ್ರತಿವಾದಿಯ ಪಟ್ಟಿಯ ಪೂರ್ವಕ್ಕೆ 1 ನೇ ವಾದಿಯ ಜಮೀನು ಬಂದಿರುತ್ತದೆ ಎಂದರೆ ಸರಿ. ಸದರಿ ವಾಟ್ನಿಯು ಕಾನೂನುಬದ್ಧವಾಗಿದ್ದು ಅದರ ಡೈರಿ ನಂ.2432 ಎಂದು ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. 1973 ರ ವಾಟ್ನಿ ಪ್ರಕಾರ ಸರ್ವೆ ನಂ.394 ರಲ್ಲಿ 3 ಪಟ್ಟಿಗಳು ಆಗಿರುತ್ತವೆ ಎಂದರೆ ಸರಿ. 1 ನೇ ವಾದಿಯು ತನಗೆ ಬಂದ ಸರ್ವೆ ನಂ.394/3 ರಲ್ಲಿ 1 ಎಕರೆ ಜಮೀನನ್ನು ನನಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ 1 ಎಕರೆ ಆಸ್ತಿಯು ಸರ್ವೆ ನಂ.394/1 ರಲ್ಲಿ ಕೂಡಿ ಇರುತ್ತದೆ ಎಂದರೆ ಸರಿಯಲ್ಲ. 1 ನೇ ವಾದಿಯ ಸರ್ವೆ ನಂ.394/3 ರ ಉತ್ತರಕ್ಕೆ ಉಳಿದ ವಾದಿಯರ ಆಸ್ತಿ 393 ಬರುತ್ತದೆ ಎಂದರೆ ಸರಿ.

ನಮ್ಮ ಮತ್ತು ವಾದಿಯರ ಊರು ಹಿರೇರೂಗಿ ಇರುತ್ತದೆ ಎಂದರೆ ಸರಿ. ಹಿರೇರೂಗಿಯಿಂದ ಪೂರ್ವಕ್ಕೆ ಮಸಳಿಗೆ ಹೋಗುವ ದಾರಿ ಇರುತ್ತದೆ ಎಂದರೆ ಸರಿ. ಸರ್ವೆ ನಂ.387, 393, 394 ರ ಮಾಲೀಕರು ಹಾಗೂ ವಾದಿಯರು ಮತ್ತು ನಾವೆಲ್ಲರೂ ಹಿರೇರೂಗಿ – ಮಸಳಿ ಬಿ.ಕೆ. ದಾರಿಯ ಪೂರ್ವಕ್ಕೆ ಹೋಗುತ್ತೇವೆ ಎಂದರೆ ಸರಿ. ಸದರಿ ಹಾದಿಯಲ್ಲಿ ವ್ಯವಸಾಯದ ಸಲಕರಣೆಗಳು ಹಾಗೂ ದನಕರುಗಳು ಟ್ರ್ಯಾಕ್ಟರಗಳನ್ನು ತೆಗೆದುಕೊಂಡು ಹೋಗುವುದು ಬರುವುದು ಮಾಡುತ್ತೇವೆ ಎಂದರೆ ಸರಿ. ನಾವು, ವಾದಿಯರು ಮತ್ತು ಇನ್ನೀತರರು ಪೂರ್ವಕ್ಕೆ ಹೋಗಿ ಮುಂದೆ ಉತ್ತರಕ್ಕೆ ಹೋರಳಿ ಹರಿ ಮುಖಾಂತರ ತಮ್ಮ ಜಮೀನುಗಳಿಗೆ ಹೋಗುತ್ತಾರೆ ಎಂದರೆ ಸರಿ. ಸದರಿ ಹರಿಯಿಂದ ಪೂರ್ವಕ್ಕೆ ಹೋರಳಿ 388/1 ಮತ್ತು 388/2 ಈ ಜಮೀನುಗಳ ಮೇಲೆ ನಾವು ಮತ್ತು ವಾದಿಯರು ಹೋಗುತ್ತೇವೆ ಎಂದರೆ ಸರಿ. ಸದರಿ 388/1 ರಲ್ಲಿ ಗಾಡಿ ಹಾದಿ ಇರುತ್ತದೆ ಎಂದರೆ ಸರಿಯಲ್ಲ. ಸದರಿ 388/1 ರಲ್ಲಿ ಇರುವ ಗಾಡಿ ಹಾದಿಯು ಗಡ್ಡೆಪ್ಪ, ಬಸಲಿಂಗಪ್ಪ ಮತ್ತು ಶ್ರೀಶೈಲ ಇವರ ಜಮೀನುಗಳ ನಡುವೆ ಹಾದು ಹೋಗುತ್ತದೆ ಎಂದರೆ ಸರಿಯಲ್ಲ. ಸದರಿ ಹಾದಿಯು ನಮ್ಮ ಜಮೀನುಗಳಲ್ಲಿ ಹಾದು ಹಳ್ಳಕ್ಕೆ ಮುಟ್ಟುತ್ತದೆ ಎಂದರೆ ಸರಿಯಲ್ಲ. ನಾನು ಮತ್ತು 2 ನೇ ಪ್ರತಿವಾದಿ ನಿಮ್ಮ ಜಮೀನುಗಳಿಗೆ ಹೇಗೆ ಹೋಗುತ್ತೀರಿ ಎನ್ನುವ ಪ್ರಶ್ನೆಗೆ ಸಾಕ್ಷಿಯು ಊರಿನಿಂದ ದೊಡ್ಡ ಹಾದಿ ಇದ್ದು ಅದು ಮಸಳಿ ಹಾದಿ ಇದ್ದು ಅದರ ಮೇಲೆ ಹೋಗುತ್ತೇವೆ ಎಂದು ನುಡಿಯುತ್ತಾರೆ. ಸದರಿ ಹಿರೇರೂಗಿ–ಮಸಳಿ ಹಾದಿಯಿಂದ



ಹರಿಮುಂದು ಗಡ್ಡೆಪ್ಪ, ಬಸಲಿಂಗಪ್ಪ, ಶ್ರೀಶೈಲ ಇವರ ಜಮೀನಿನಲ್ಲಿ ಇರುವ ಸರ್ಕಾರಿ ಹಾದಿಯ ಮೇಲೆ ನಮ್ಮ ಜಮೀನುಗಳಿಗೆ ಹೋಗುತ್ತೇವೆ ಎಂದರೆ ಸರಿ. ಸದರಿ 1973 ರ ವಾಟ್ನಿಯಲ್ಲಿ 1 ನೇ ವಾದಿಗೆ ಸರ್ವೆ ನಂ.394/3 ಬಂದಿದ್ದು ಇದರಲ್ಲಿ ಸಾಗುವಳಿ ಮಾಡಬೇಕಾದರೆ ನಮ್ಮ ಪಟ್ಟಿಗಳಿಂದ ತಿರುಗಾಡದೇ ಅವರು ಸಾಗುವಳಿ ಮಾಡುವುದಕ್ಕೆ ಆಗುವುದಿಲ್ಲ ಎಂದರೆ ಸರಿಯಲ್ಲ. ದಾವಾ ದಾರಿಯಲ್ಲಿ ವಾದಿಯರಿಗೆ 1973 ರ ವಾಟ್ನಿಯಂತೆ ಹಕ್ಕು ಉಂಟಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ದಾರಿಯಲ್ಲಿ ವಾದಿಯರು ಚಿರಭೋಗದ ಅವಶ್ಯಕತೆ ನಾತೆಯಿಂದ ವರ್ಷದ 12 ತಿಂಗಳಲ್ಲಿ ತಮ್ಮ ಜಮೀನುಗಳಿಗೆ ಟ್ರ್ಯಾಕ್ಟರ ದನಕರುಗಳು ಮತ್ತು ಇನ್ನೀತರ ಸಲಕರಣೆಗಳನ್ನು ತೆಗೆದುಕೊಂಡು

ಉಪಭೋಗ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ದಾರಿಯನ್ನು ಬಿಟ್ಟು ವಾದಿಯರಿಗೆ ಬೇರೆ ದಾರಿ ಇರುವುದಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ಬಂದು ನೋಡಿರಿ ಎಂದು ನುಡಿಯುತ್ತಾರೆ.

1 ನೇ ವಾದಿ, ನಾನು ಮತ್ತು 2 ನೇ ಪ್ರತಿವಾದಿ ಸರ್ವೆ ನಂ.393 ರ ಮಾಲೀಕರಿಗೆ ನಮ್ಮ ಜಮೀನುಗಳಲ್ಲಿ ದಾರಿ ಹಕ್ಕು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸದರಿ ದಾರಿ ಕೊಟ್ಟ ಕಾರಣ ಡೈರಿಯಾಗಿರುತ್ತದೆ ಎಂದರೆ ಸರಿ. ಸದರಿ ಡೈರಿಯಲ್ಲಿ ಸರ್ವೆ ನಂ.393 ರ ಮಾಲೀಕರಿಗೆ ಮತ್ತು ವಾದಿಯರಿಗೆ ಹಾದಿ ಇರುವುದಿಲ್ಲವೆಂದು ನಾನು ಸ್ಪಷ್ಟವಾಗಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಲಿಖಿತ ಹೇಳಿಕೆಯಲ್ಲಿ ವಾದಿಯರಿಗೆ ನಿರ್ದಿಷ್ಟವಾಗಿ ಬೇರೆ ದಾರಿ ಇರುತ್ತದೆ ಎಂದು ಬರೆಸಿಲ್ಲ ಎಂದರೆ ಸರಿಯಲ್ಲ. ದಾವಾ ದಾರಿಗೆ ನಾವು ಅಡ್ಡಿಪಡಿಸಿದ್ದರಿಂದ 2018 ನೇ ಇಸವಿಯಲ್ಲಿ ವಾದಿಯರು ತಹಶೀಲ್ದಾರ ಇವರಿಗೆ ಅರ್ಜಿಯನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾವಾ ದಾರಿಗೆ ಅಡ್ಡಿಪಡಿಸಿರುವುದನ್ನು ತೆರವು ಮಾಡುವಂತೆ ತಹಶೀಲ್ದಾರ ಇವರಿಗೆ ಅರ್ಜಿಯನ್ನು ವಾದಿಯರು ನೀಡಿರುತ್ತಾರೆ ಎಂದರೆ ಸರಿಯಲ್ಲ. ದಿಃ24.08.2018 ರಂದು ವಾದಿಯರು ನೀಡಿದ ಅರ್ಜಿಗೆ ಅನುಗುನವಾಗಿ ರೆವಿನ್ಯೂ ಇನ್ಸಪೆಕ್ಟರ ಮತ್ತು ಸರ್ವೆಯರ ರವರು ಬಂದಿದ್ದರು ಎಂದರೆ ಸರಿಯಲ್ಲ. ಸದರಿಯವರು ಸ್ಥಾನಿಕ ಚೌಕಾಶಿ ಮಾಡಿ ನಮ್ಮ ಜಮೀನಿನಲ್ಲಿ ಸರ್ಕಾರಿ ಹಾದಿ ಇದ್ದ ಬಗ್ಗೆ ವರದಿ ತಯಾರಿಸಿ ತಹಶೀಲ್ದಾರ ಇವರಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವರದಿಯಲ್ಲಿ ನನ್ನ ಹಾಗೂ 2 ನೇ ಪ್ರತಿವಾದಿಯ ಜಮೀನಿನಲ್ಲಿ ವಾದಿಯರಿಗೆ ದಾರಿ ಇರುತ್ತದೆ ಎಂದು ತೋರಿಸಿರುತ್ತಾರೆ ಎಂದರೆ ಸಾಕ್ಷಿಯು ಅವರು ಸಾಕ್ಷಿ ಹೇಳಲಿ ಎಂದು ನುಡಿಯುತ್ತಾರೆ. ಸದರಿ ರೆವಿನ್ಯೂ ಇನ್ಸಪೆಕ್ಟರ ಮತ್ತು ಸರ್ವೆಯರ ರವರು ವರದಿಗೆ ಸಂಬಂಧಿಸಿದಂತೆ ಈ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿರುತ್ತಾರೆ ಎಂದರೆ ಎಲ್ಲವೂ ಸುಳ್ಳು ಇರುತ್ತದೆ ಎಂದು ನುಡಿಯುತ್ತಾರೆ.

1 ನೇ ವಾದಿಯು ತನಗೆ ಬಂದ ಸರ್ವೆ ನಂ.394/3 ರಲ್ಲಿ ತಮ್ಮ ಮಕ್ಕಳ ನಡುವೆ 3 ಪಟ್ಟಿಗಳಾಗಿ ವಾಟ್ನಿ ಮಾಡಿಕೊಂಡಿರುತ್ತಾರೆ ಎಂದರೆ ಸರಿ. 1973 ರ ವಾಟ್ನಿಯಂತೆ ವಾದಿಯರಿಗೆ ದಾವಾ ದಾರಿಯ ಹಕ್ಕು ಇದ್ದು ನನಗೆ ಅಡ್ಡಿಮಾಡುವ ಹಕ್ಕು ಇರುವುದಿಲ್ಲ ಎಂದರೆ ಸಾಕ್ಷಿಯು ಅವರು ದಾರಿ ತೋರಿಸಲಿ ಎಂದು ನುಡಿಯುತ್ತಾರೆ. ವಾದಿಯರಿಗೆ ದಾವಾ ದಾರಿ ಕೊಡಬಾರದು ಎನ್ನುವ ದುರುದ್ದೇಶದಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಲಿಖಿತ ಹೇಳಿಕೆಯಲ್ಲಿ ಮತ್ತು ಸಾಕ್ಷಾ ಪ್ರಮಾಣ ಪತ್ರಿಕೆಯಲ್ಲಿ ಇರುವ ಸಂಗತಿಯು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ: ಇಲ್ಲ:</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ. ಸರಿ ಇದೆ.

ಸಹಿ/–

ಜೆ.ಎಂ.ಎಫ್.ಸಿ. ನ್ಯಾಯಾಲಯ

ಇಂಡಿ.